

# ಸೋಮಾರಿ ಯುವಕ

ದೊಡ್ಡ ಮನೆಯೊಂದರಲ್ಲಿ ಸೋಮಾರಿ ಯುವಕನೊಬ್ಬನಿದ್ದ. ಆತ ಪ್ರತಿನಿತ್ಯ ಮಧ್ಯಾಹ್ನದ ವೇಳೆಗೆ ಹಾಸಿಗೆಯಿಂದ ಏಳುತ್ತಿದ್ದ. ಎದ್ದವನೆ ಊಟ ಮಾಡಿ, ಮತ್ತೆ ಹಾಸಿಗೆಯಲ್ಲೊರಗಿ ನಿದ್ರೆ ಹೋಗುತ್ತಿದ್ದ. ಆತನ ಬಳಿ 'ಪಾಲಿ' ಎಂಬ ಗಿಳಿಯೊಂದಿತ್ತು. ಅವನನ್ನು ಗಮನಿಸಿ ಅದು ದಿಗಿಲುಗೊಂಡಿತ್ತು.

ಒಂದು ದಿನ ಮಾತನಾಡುವ ಆ ಗಿಳಿ ಪಾಲಿ ಅವನನ್ನು ಪ್ರಶ್ನಿಸಿತು: 'ನೀನು ಹೀಗೆ ಹಗಲು ರಾತ್ರಿ ಒಂದೇಸಮನೆ ಹಾಸಿಗೆಯಲ್ಲಿ ಮಲಗಿರುವೆಯಲ್ಲ, ನಿನಗೆ ಆಯಾಸವಾಗುವುದಿಲ್ಲವೆ? ಸೂರ್ಯ ಉದಯಿಸಿ ಆಗಲೆ ಹಲವು ಗಂಟೆಗಳಾಗಿವೆ. ಜನರೆಲ್ಲ ಈಗಾಗಲೆ ತಮ್ಮ ಅರ್ಧದಿನದ ಕೆಲಸ ಮುಗಿಸಿಯಾಗಿದೆ.'

ಅದಕ್ಕೆ ಯುವಕ ಉತ್ತರಿಸಲಿಲ್ಲ.

'ಅಯ್ಯೋ ಹುಡುಗ ನೀನೇಕೆ ಇಷ್ಟು ಸೋಮಾರಿಯಾದೆ?' ಮತ್ತೆ ಕೇಳಿತು ಗಿಳಿ ತನ್ನ ರೆಕ್ಕೆಗಳನ್ನು ಕೆದರಿಕೊಳ್ಳುತ್ತಾ. ಈಗ ಯುವಕ, ಆಕಳಿಸಿ ಮೈ ಮುರಿಯುತ್ತಾ ನುಡಿದ:

'ಪ್ರತಿ ದಿನ ನನಗೆ ಎಚ್ಚರವಾದಾಗ ಇಬ್ಬರು ಮಿತ್ರರು ನನ್ನ ಕಿವಿಯಲ್ಲಿ ಪಿಸುಗುಡುತ್ತಾರೆ. ಒಬ್ಬ ಕಠಿಣ ದುಡಿಮೆಯವ. ಮತ್ತೊಬ್ಬ ಸೋಮಾರಿ. ಕಠಿಣ ದುಡಿಮೆಯವ, 'ಏಳು, ಎದ್ದೇಳು ಈ ದಿನ ಮಾಡಬೇಕಾದುದು ತುಂಬಾ ಇದೆ. ಕಾಲ ಕಳೆದು ಹೋಗುತ್ತಿದೆ. ನಿದ್ರೆ ಮಾಡುತ್ತಾ ಸಮಯ ವ್ಯರ್ಥಗೊಳಿಸಬೇಡ' ಎನ್ನುತ್ತಾನೆ. ಆದರೆ ಸೋಮಾರಿ ಮಿತ್ರ, 'ಎದ್ದೇಳುವಲ್ಲಿ ಆತುರವಾದರೂ ಏತಕ್ಕೆ? ಇನ್ನೂ ಸ್ವಲ್ಪ ನಿದ್ರೆ ಮಾಡಬಾರದೆ? ನೀನು ಯಾಕೆ ಕಷ್ಟ ಪಡಬೇಕು?!' ಎನ್ನುತ್ತಾನೆ. ನಾನು ತಾಳ್ಮೆಯಿಂದ ಇಬ್ಬರ ಸಲಹೆಯನ್ನು ಕೇಳಿಸಿಕೊಳ್ಳುವೆ. ಹೀಗೆ ನನ್ನ ಸಮಯವೆಲ್ಲ ಕಳೆದು ಹೋಗುತ್ತಿದೆ. ನಾನು ಹೆಚ್ಚು ಕಾಲ ಹಾಸಿಗೆಯಲ್ಲೆ ಮಲಗಿರುತ್ತೇನೆ' ಎಂದ ಸೋಮಾರಿ ಯುವಕ, ಮತ್ತೆ ನಿದ್ರೆಗೆ ಜಾರಿದ!